# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 625 |
| ಸದಸ್ಯರ ಹೆಸರು: | ಶ್ರೀ ಮಧು ಜಿ. ಮಾದೇಗೌಡ (ಪದವೀಧರ ಕ್ಷೇತ್ರ) |
| ಉತ್ತರಿಸುವ ದಿನಾಂಕ: | 23.12.2022 |
| ಉತ್ತರಿಸುವ ಸಚಿವರು: | ಕೃಷಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ, ಮೈಸೂರು, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ 2022-23ನೇ ಸಾಲಿನ ಮುಂಗಾರು ಹಂಗಾಮಿನ ಭತ್ತ ಮತ್ತು ರಾಗಿ ಬೆಳೆಯ ವಿಸ್ತೀರ್ಣ ಹಾಗೂ ಅಂದಾಜು ಉತ್ಪಾದನೆ ಎಷ್ಟು: | ಮಂಡ್ಯ, ಮೈಸೂರು, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ 2022-23ನೇ ಸಾಲಿನ ಮುಂಗಾರು ಹಂಗಾಮಿನ ಭತ್ತ ಮತ್ತು ರಾಗಿ ಬೆಳೆಯ ವಿಸ್ತೀರ್ಣ ಹಾಗೂ ಅಂದಾಜು ಉತ್ಪಾದನೆಯ ವಿವರ ಈ ಕೆಳಕಂಡಂತಿದೆ. |

| ಕ್ರ. ಸಂ | ಜಿಲ್ಲೆಗಳು | ವಿಸ್ತೀರ್ಣ (ಹೆಕ್ಟೇರ್ ಗಳಲ್ಲಿ) | | ಅಂದಾಜು ಉತ್ಪಾದನೆ (ಟನ್ ಗಳಲ್ಲಿ) | |
|---|---|---|---|---|---|
| | | ಭತ್ತ | ರಾಗಿ | ಭತ್ತ | ರಾಗಿ |
| 1 | ಮಂಡ್ಯ | 61419 | 45728 | 174337 | 97312 |
| 2 | ಮೈಸೂರು | 104201 | 46485 | 248612 | 92066 |
| 3 | ಹಾಸನ | 36610 | 68133 | 110215 | 101280 |
| 4 | ಚಾಮರಾಜನಗರ | 12490 | 12661 | 30252 | 12961 |

ಷರಾ: 2022-23ರ ವಿಸ್ತೀರ್ಣ ಹಾಗೂ ಉತ್ಪಾದನೆಯ ಅಂತಿಮ ಅಂದಾಜು ವರದಿಯನ್ನು ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯ, ಬೆಂಗಳೂರು ರವರು ಸಿದ್ಧಪಡಿಸುತ್ತಾರೆ.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | ಸದರಿ ಜಿಲ್ಲೆಗಳಲ್ಲಿ ಭತ್ತ ಮತ್ತು ರಾಗಿ ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆಯೇ, ತೆರೆಯದಿದ್ದಲ್ಲಿ ಯಾವಾಗ ಆರಂಭಿಸಲಾಗುತ್ತದೆ; ಈ ನಿಟ್ಟಿನಲ್ಲಿ ಸರ್ಕಾರ ಕೈಗೊಂಡಿರುವ ಸಿದ್ಧತೆಗಳೇನು; | ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ 2022-23 ಸಾಲಿನಲ್ಲಿ ರಾಜ್ಯದ ರೈತರಿಂದ ಭತ್ತ, ರಾಗಿ ಮತ್ತು ಬಿಳಿಜೋಳ ಖರೀದಿಗೆ ಸಂಬಂಧಿಸಿದಂತೆ ಜಿಲ್ಲೆಗಳ ಹಂತದಲ್ಲಿ ಅಗತ್ಯಕ್ಕೆ ತಕ್ಕಂತೆ ಖರೀದಿ ಏಜೆನ್ಸಿಗಳ ಮುಖಾಂತರ ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ. ರೈತರ ನೋಂದಣಿಯನ್ನು ಕಾರ್ಯವನ್ನು ದಿನಾಂಕ : 15/12/2022 ಪ್ರಾರಂಭಿಸಲಾಗಿದೆ. ದಿನಾಂಕ : 1/1/2023 ರಿಂದ 31/3//2023 ರವರೆಗೆ ನೋಂದಾಯಿತ ರೈತರಿಂದ ಆಹಾರ ಧಾನ್ಯಗಳನ್ನು ಖರೀದಿಸಲಾಗುವುದು. |

<table>
<tr>
<td>ಇ)</td>
<td>ಭತ್ತ ಮತ್ತು ರಾಗಿ ಬೆಳೆಗೆ ಬೆಂಬಲ ಬೆಲೆ ನಿಗಧಿಪಡಿಸಲಾಗಿದೆಯೇ; ಹಾಗಿದ್ದರೆ, ಪ್ರತಿ ಕ್ವಿಂಟಾಲ್ ಗೆ ನಿಗಧಿಪಡಿಸಿರುವ ದರ ಎಷ್ಟು; ಖರೀದಿ ಮಿತಿಯನ್ನು ಸಡಿಲಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;</td>
<td>2022-23 ನೇ ಸಾಲಿನಲ್ಲಿ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಭತ್ತ, ರಾಗಿ ಮತ್ತು ಬಿಳಿಜೋಳಕ್ಕೆ ಕೇಂದ್ರ ಸರ್ಕಾರವು ಈ ಕೆಳಗಿನಂತೆ ದರವನ್ನು ನಿಗಧಿಪಡಿಸಿದ್ದು, 5.00 ಲಕ್ಷ ಮೆಟ್ರಿಕ್ ಟನ್ ಭತ್ತ, 5.00 ಲಕ್ಷ ಮೆಟ್ರಿಕ್ ಟನ್ ರಾಗಿ ಮತ್ತು 2.00 ಲಕ್ಷ ಮೆಟ್ರಿಕ್ ಟನ್ ಬಿಳಿಜೋಳವನ್ನು ಖರೀದಿಸಲು ಅನುಮತಿ ನೀಡಿದೆ.
<table>
<tr><th colspan="2">ಬೆಳೆ</th><th>ದರ ಪ್ರತಿ ಕ್ವಿಂಟಾಲ್</th></tr>
<tr><td>ಭತ್ತ</td><td>Common</td><td>2040</td></tr>
<tr><td></td><td>Grade A</td><td>2060</td></tr>
<tr><td>ರಾಗಿ</td><td></td><td>3578</td></tr>
</table>
ಅದರಂತೆ ಭತ್ತ ಬೆಳೆಯುವ ಪ್ರತಿ ರೈತರಿಂದ ಪ್ರತಿ ಉತ್ಪಾದನೆಗೆ ಅನುಗುಣವಾಗಿ ಎಕರೆಗೆ 25 ಕ್ವಿಂಟಾಲ್ ಹಾಗೂ ಗರಿಷ್ಟ 40 ಕ್ವಿಂಟಾಲ್ ಭತ್ತವನ್ನು ಖರೀದಿಸಲಾಗುವುದು.<br><br>
ರಾಗಿ/ಬಿಳಿಜೋಳವನ್ನು ಬೆಳೆಯುವ ಸಣ್ಣ ಮತ್ತು ಅತೀ ಸಣ್ಣ ರೈತರಿಂದ ಉತ್ಪಾದನೆಗೆ ಅನುಗುಣವಾಗಿ ಪ್ರತಿ ಎಕರೆಗೆ 10 ಕ್ವಿಂಟಾಲ್ ನಂತೆ ಗರಿಷ್ಟ 20 ಕ್ವಿಂಟಾಲ್ ರಾಗಿ /ಬಿಳಿಜೋಳವನ್ನು ಖರೀದಿಸಲಾಗುತ್ತದೆ.</td>
</tr>
<tr>
<td>ಈ)</td>
<td>ರಾಜ್ಯದಲ್ಲಿ ಭತ್ತ ಬೆಳೆಯುವ ಯಾವ ಜಿಲ್ಲೆಯ ರೈತರಿಗೆ ರಾಜ್ಯ ಸರ್ಕಾರ ಪ್ರೋತ್ಸಾಹಧನ ನೀಡುವ ನಿರ್ಧಾರ ಮಾಡಿದೆ; ರಾಜ್ಯದ ಎಲ್ಲಾ ಭತ್ತದ ಬೆಳೆಗಾರರಿಗೂ ಪ್ರೋತ್ಸಾಹಧನ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;</td>
<td>ಕೇಂದ್ರ ಪುರಸ್ಕೃತ - ರಾಷ್ಟ್ರೀಯ ಆಹಾರ ಭದ್ರತೆ ಯೋಜನೆಯಡಿ ಅಕ್ಕಿ ಕಾರ್ಯಕ್ರಮವನ್ನು ರಾಜ್ಯದ ಏಳು (7) ಜಿಲ್ಲೆಗಳಲ್ಲಿ (ಬೆಳಗಾವಿ, ದಕ್ಷಿಣ ಕನ್ನಡ, ಹಾವೇರಿ, ಶಿವಮೊಗ್ಗ, ಉಡುಪಿ, ಉತ್ತರ ಕನ್ನಡ ಮತ್ತು ಯಾದಗಿರಿ) ಅನುಷ್ಠಾನ ಮಾಡಲಾಗುತ್ತಿದೆ. NFSM – ಅಕ್ಕಿ ಯೋಜನೆಯಲ್ಲಿ ದೊಡ್ಡ ಪ್ರಮಾಣದ ಪ್ರಾತ್ಯಕ್ಷಿಕೆಗಳು, ಪ್ರಮಾಣಿತ ಬಿತ್ತನೆ ಬೀಜ ವಿತರಣೆ (10 ವರ್ಷಗಳಿಂದೀಚೆಗಿನ ಮತ್ತು 10 ವರ್ಷಗಳ ಮೇಲ್ಪಟ್ಟ ತಳಿಗಳು), ಸಮಗ್ರ ಪೋಷಕಾಂಶ ಮತ್ತು ಪೀಡೆ ನಿರ್ವಹಣೆ ಘಟಕಗಳು, ಕೃಷಿ ಯಾಂತ್ರಿಕರಣ, ನೀರಾವರಿ ಸಾಧನಗಳು, ಮತ್ತು ಹಸಿರೆಲೆ ಬಿತ್ತನೆ ಬೀಜಗಳ ಘಟಕಗಳನ್ನು ಶೇ. 50ರ ರಿಯಾಯಿತಿ ದರದಲ್ಲಿ ವಿತರಣೆಗೆ ಅವಕಾಶ ಕಲ್ಪಿಸಲಾಗಿದೆ.<br>
ಉಳಿದಂತೆ, ನೇರವಾಗಿ ಭತ್ತ ಬೆಳೆಯುವ ರೈತರಿಗೆ ಪ್ರೋತ್ಸಾಹಧನ ನೀಡುವ ಕಾರ್ಯಕ್ರಮ ಹಾಗೂ ರಾಜ್ಯದ ಎಲ್ಲಾ ಭತ್ತದ ಬೆಳೆಗಾರರಿಗೂ ಪ್ರೋತ್ಸಾಹಧನ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ .</td>
</tr>
</table>

| | | |
|---|---|---|
| ಉ) | ಭತ್ತದ ಬೆಳೆಗಾರರಿಗೆ ಯಾವ ಮಾನದಂಡಗಳನ್ನು ಆಧರಿಸಿ ಪ್ರೋತ್ಸಾಹಧನ ನೀಡಲು ಸರ್ಕಾರ ಉದ್ದೇಶಿಸಿದೆ? (ವಿವರ ನೀಡುವುದು) | ಕರಾವಳಿ ಜಿಲ್ಲೆಗಳಾದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿ ಸಾರ್ವಜನಿಕ ವಿತರಣಾ ಪದ್ಧತಿಯಡಿ ಕುಚ್ಚಲಕ್ಕಿಯನ್ನು ವಿತರಿಸುವಂತೆ ಪಡಿತರ ಫಲಾನುಭವಿಗಳ ಬೇಡಿಕೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಸ್ಥಳೀಯವಾಗಿ ಬೆಳೆಯುವ ತಳಿಗಳ ಭತ್ತವನ್ನು ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಿ ಸದರಿ ಭತ್ತವನ್ನು ಕುಚ್ಚಲಕ್ಕಿಯನ್ನಾಗಿ ಪರಿವರ್ತಿಸಿ 03 ಜಿಲ್ಲೆಗಳಲ್ಲಿನ ಪಡಿತರ ಫಲಾನುಭವಿಗಳಿಗೆ ವಿತರಿಸಲು ಕೇಂದ್ರ ಸರ್ಕಾರವು ಅನುಮತಿಯನ್ನು ನೀಡಿರುತ್ತದೆ. ಈ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಬೆಳೆಯುವ ಸ್ಥಳೀಯ ತಳಿಗಳಾದ ಜಯಾ, ಜ್ಯೋತಿ, ಕಜೆ, ಸಹ್ಯಾದ್ರಿ, ಅಭಿಲಾಷ, ಉಮಾ ಮತ್ತು MO4 ಭತ್ತವನ್ನು ಸ್ಥಳೀಯ ರೈತರಿಂದ ಖರೀದಿಸಿ ಕುಚ್ಚಲಕ್ಕಿಯನ್ನಾಗಿ ಪರಿವರ್ತಿಸುವ ಸಲುವಾಗಿ ರಾಜ್ಯ ಸರ್ಕಾರವು ಸದರಿ ತಳಿಗಳ ಭತ್ತಕ್ಕೆ ಪ್ರತಿ ಕ್ವಿಂಟಾಲ್‌ಗೆ ರೂ.500/-ಗಳ ಪ್ರೋತ್ಸಾಹಧನವನ್ನು ನಿಗಧಿಪಡಿಸಿದೆ. |

ಸಂಖ್ಯೆ : AGRI –ACT/281/2022

(ಬಿ.ಸಿ. ಪಾಟೀಲ್)
ಕೃಷಿ ಸಚಿವರು